# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮಾಲೂರು

**ಒ.ಎಸ್. ನಂ. 302/2019** **ಸಿಡಬ್ಲ್ಯು: 1**

ಹೆಸರು: ಬಿ.ಎಸ್. ಶಂಕರನಾರಾಯಣ ಮೂರ್ತಿ
ತಂದೆಯ ಹೆಸರು: ಸಂಪಗಿ ರಾಮಯ್ಯ
ವಯಸ್ಸು: 50 ವರ್ಷ
ಉದ್ಯೋಗ: ಪತ್ರ ಬರಹಗಾರರು
ವಾಸ ಸ್ಥಳ: ಬ್ಯಾಟರಾಯನ ಹಳ್ಳಿ, ಮಾಲೂರು ತಾಲ್ಲೂಕು

**ದಿನಾಂಕ: 28.02.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಟಿ. ಎನ್. ಸಿ . ವಾದಿಯ ಪರ ವಕೀಲರಿಂದ:**

ಸಾಕ್ಷಿಗೆ ನಿಪಿ: 2 ಅನ್ನು ತೋರಿಸಲಾಗಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ: 2(ಇ) ಎಂದು ಗುರುತಿಸಲಾಗಿದೆ. ನಿಪಿ: 2 ಅನ್ನು ದಿ: 12.09.2017 ರಂದು ತಯಾರಿಸಲಾಗಿರುತ್ತದೆ. ನಿಪಿ: 2 ಅನ್ನು ನಾನು ನಾರಾಯಣಸ್ವಾಮಿಯವರ ಹೇಳಿಕೆಯ ಮೇರೆಗೆ ತಯಾರಿಸಿರುತ್ತೇನೆ. ಸ.ನಂ. 30/2 ಓಬಟ್ಟಿ ಗ್ರಾಮಕ್ಕೆ ಸೇರಿದ ಜಮೀನಿಗೆ ಸಂಬಂಧಿಸಿದಂತೆ ನಿಪಿ: 2 ಅನ್ನು ತಯಾರಿಸಿರುತ್ತೇನೆ. ನಿಪಿ: 2 ಅನ್ನು ತಯಾರಿಸುವಾಗ ವಾದಿ ಮತ್ತು ಪ್ರತಿವಾದಿಯರು ಹಾಜರಿದ್ದರು. ನಿಪಿ: 2 ರ ವಿವರಗಳನ್ನು ನಾನು ವಾದಿ ಮತ್ತು ಪ್ರತಿವಾದಿಯರಿಗೆ ಓದಿ ಹೇಳಿರುತ್ತೇನೆ. ನಿಪಿ: 2 ಕ್ಕೆ ಮುನಿಯಮ್ಮ, ಗಂಗಲಕ್ಷ್ಮಮ್ಮ, ಸುಶೀಲಮ್ಮ , ಸಾಕಮ್ಮ , ಲಕ್ಷ್ಮಮ್ಮ, ನಾರಾಯಣಸ್ವಾಮಿ ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ. ಪಕ್ಷಗಾರರೇ ಹಣದ ವ್ಯವಹಾರವನ್ನು ಮಾಡಿಕೊಂಡು ಬಂದಿರುತ್ತಾರೆ. ನಿಪಿ: 2 ಕ್ಕೆ ಸಾಕ್ಷಿದಾರರಾಗಿ ಶಾಂತ ಕುಮಾರ್, ನಾಗೇಶ್ ಮತ್ತು ಕೃಷ್ಣಪ್ಪರವರು ಸಹಿ ಮಾಡಿರುತ್ತಾರೆ. ನಿಪಿ: 2 ಅನ್ನು ನೋಂದಣಿ ಮಾಡಿಸುವಾಗ ಸಾಯಂಕಾಲ 4 ಗಂಟೆ ಸಮಯ ಆಗಿತ್ತು.

**ಪ್ರತಿವಾದಿಗಳು ಏಕತರ್ಫಿಯರಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.
ಸಹಿ/-

**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**